



ಕೊರೊನಾ ರೋಗಾಣುವಿನ ತವರು ಎಂದು ಗುರ್ತಿಸಲಾಗಿರುವ ಚೀನಾದ ವುಹಾನ್‌ನಲ್ಲಿ ಮಾಂಸದ ಮಾರಾಟಗಾರನೊಬ್ಬ ಗ್ರಾಹಕರ ನಿರೀಕ್ಷೆಯಲ್ಲಿರುವುದು. ಇಲ್ಲಿನ ಮಾಂಸದಂಗಡಿಗಳು ವನ್ಯಮೃಗಗಳ ಮಾಂಸವನ್ನೂ ಪೂರೈಸುತ್ತವೆ.

ಹವಳ ದ್ವೀಪಗಳನ್ನು ಬಿಳಿಚಿಕೊಳ್ಳುವಂತೆ ಮಾಡುತ್ತಿದೆ. ಒಂದು ಹಂತದಲ್ಲಿ ಇಡೀ ಸಾಗರ ಕಾರ್ಬನ್ ಡೈ ಆಕ್ಸೈಡನ್ನು ಹೀರಿಕೊಳ್ಳದ ಮಟ್ಟ ತಲಪಿದರೆ ಗತಿ ಏನು? ಒಂದು ಲೋಟ ನೀರಿಗೆ ಒಂದು ಲೋಟ ಉಪ್ಪು ಬೆರೆಸಿದರೆ ಅದು ಕರಗುವುದೆಂತು? ಇಂಥ ದುಃಸ್ಥಿತಿ ಸಮುದ್ರಕ್ಕೆ ಬಂದಿದೆ. ಏಕೆಂದರೆ ಅಂದಾಜಿನಂತೆ 38,000 ಶತಕೋಟಿ ಟನ್ನು ಕಾರ್ಬನ್ ಡೈ ಆಕ್ಸೈಡನ್ನು ಹೀರಿ ಸಂತೃಪ್ತವಾಗಿಬಿಟ್ಟಿದೆ. ಇನ್ನೂ ಹೆಚ್ಚುವರಿ ಕಾರ್ಬನ್ ಡೈ ಆಕ್ಸೈಡನ್ನು ಸ್ವೀಕರಿಸದ ಹಂತ ತಲುಪಿದರೆ, ಜೀವಜಗತ್ತು ಅರೆಕ್ಷಣವೂ ಈ ಗ್ರಹದಲ್ಲಿರಲಾರದು.

ಇನ್ನು, ಕಾಡುನಾಶದ ಪ್ರಮಾಣವನ್ನು ಊಹಿಸಿಕೊಂಡರೆ ಎದೆ ಬಡಿತ ಪ್ರಾರಂಭವಾಗುತ್ತದೆ. ಇದು ವಿಶ್ವಬ್ಯಾಂಕ್ ನೀಡಿರುವ ವರದಿ: ಇಪ್ಪತ್ತನೇ ಶತಮಾನದ ಆರಂಭದಿಂದ ತೊಡಗಿ ಈವರೆಗೆ ಪ್ರತಿವರ್ಷ 38,300 ಚದರ ಕಿಲೋ ಮೀಟರ್ ಕಾಡು ನಾಶವಾಗುತ್ತಿದೆಯಂತೆ. ಅಷ್ಟೇಕೆ, ಜಗತ್ತಿನಲ್ಲಿ ಶೇ. 20 ಭಾಗ ಆಮ್ಲಜನಕದ ಕೊಡುಗೆ ಅಮೆಜಾನ್‌ನ ಮಳೆಕಾಡಿನಿಂದ ಬರುತ್ತಿದೆ. ಅದನ್ನು 'ವಿಶ್ವದ ಶ್ವಾಸಕೋಶ' ಎನ್ನುವುದುಂಟು. ಕಳೆದ ಒಂದೇ ವರ್ಷದಲ್ಲಿ 9762 ಚದರ ಕಿಲೋ ಮೀಟರ್ ವಿಸ್ತೀರ್ಣದ ಕಾಡು ಬೋಳಾಗಿದೆ. ಉಪಗ್ರಹಗಳ ಕಣ್ಣು ಸುಳ್ಳು ಹೇಳುವುದಿಲ್ಲ. ವಿಶ್ವ ಪರಿಸರ ಯೋಜನೆಯ ಇತ್ತೀಚಿನ ವರದಿ ನೋಡಿದರೆ ದಿಗಿಲಾಗುತ್ತದೆ. ಪ್ರತಿ 24 ಗಂಟೆಗೆ 150ರಿಂದ 200 ಜೀವಿ ಪ್ರಭೇದಗಳು ಭೂಮಿಯಿಂದ ಕಣ್ಮರೆಯಾಗುತ್ತಿವೆ. ಇವೆಲ್ಲಕ್ಕೂ ಕಾರಣ ಮನುಷ್ಯನೇ. ಈ ಲೆಕ್ಕದಲ್ಲಿ ಜಗತ್ತಿನ ಪ್ರತಿ ಪ್ರಜೆಯೂ ಅಪರಾಧಿಯೇ. ಬಹುಶಃ ನಾವು ಒಂದು ಅಂಶವನ್ನು ಮನಗಂಡಿಲ್ಲ. ಈ ಜೀವಿಲೋಕದಲ್ಲಿ ಒಂದಲ್ಲ ಒಂದು ಹಂತದಲ್ಲಿ ಎಲ್ಲ ಜೀವಿಯೂ ಆಹಾರ ಸರಪಳಿಯ ಕೊಂಡಿಯೇ. ಒಂದು ಕಳಚಿದರೆ ಅದು ತರುವ ಆಘಾತ ಊಹೆಗೂ ಮೀರಿದ್ದು.

ಈಗಿನ ಕೊರೊನಾ ವೈರಸ್‌ನ ಮೂಲ ಹುಡುಕಲು ಹೊರಟರೆ ಅದು ನಮ್ಮ ಆಹಾರ ಪದ್ಧತಿಯನ್ನೇ ಪ್ರಶ್ನಿಸುವಂತಿದೆ. ಚೀನಾದ ವುಹಾಂಗ್ ಪಟ್ಟಣವೇ ಈ ವೈರಸ್‌ನ ಉಗಮ ಕೇಂದ್ರವಾಯಿತು. ಅಲ್ಲಿ ಸಾಕುಪ್ರಾಣಿಗಳನ್ನು ಕೊಲ್ಲುವುದಕ್ಕಿಂತ ಹೆಚ್ಚು ವನ್ಯಜೀವಿಗಳ ಮಾಂಸ ಮಾರಾಟವೇ ಹೆಚ್ಚು. ವನ್ಯಜೀವಿಗಳನ್ನು ಬೆಳೆಸಲೆಂದೇ ಇಡೀ ಚೀನಾದಲ್ಲಿ 20 ಸಾವಿರ ಫಾರಂಗಳಿವೆಯಂತೆ. ಅರಣ್ಯದ ಬಾವಲಿ, ಚಿಪ್ಪುಹಂದಿಗಳಲ್ಲಿದ್ದ ಕೊರೊನಾ ವೈರಸ್ ಈ ಮಾಂಸದಂಗಡಿಯಿಂದ ಕೊಂಡ ಮಾಂಸದ ಮೂಲಕ ಹೊರಬಿದ್ದು ಅಂತಿಮವಾಗಿ ಮನುಷ್ಯರ ಹೊಟ್ಟೆಹೊಕ್ಕಿತು. ಇಡೀ ಜಗತ್ತಿಗೇ ಅದು ಹಬ್ಬಿ ಈಗ ಮಾಡುತ್ತಿರುವ ರಾದ್ಧಾಂತ ಕಣ್ಣೆದುರಿಗೇ ಇದೆ. ಇಲ್ಲಿ ಒಂದು ಪ್ರಶ್ನೆ? ಮನುಷ್ಯನಿಗೆ ಸಹಜವಾದ ಆಹಾರ ಸೇವನೆ, ಅದು ಸಸ್ಯವಾಗಿರಬಹುದು, ಮಾಂಸವಾಗಿರಬಹುದು, ಎಂದೂ ಕಾಯಿಲೆಯನ್ನು ತರುವಷ್ಟು ಪ್ರಬಲ ಸೂಕ್ಷ್ಮಜೀವಿಗಳನ್ನು ಹೊಂದಿರುವುದಿಲ್ಲ. ಆದರೆ ಕಾಡುಪ್ರಾಣಿಗಳು ಕೆಲವು ವೈರಸ್‌ಗಳಿಗೆ ಸಹಜವಾದ ನಿರೋಧಕ ಶಕ್ತಿ ಬೆಳೆಸಿಕೊಂಡಿರುತ್ತವೆ. ಅದು ಮನುಷ್ಯನ ಹೊಟ್ಟೆ ಹೊಕ್ಕಾಗ, ಮನುಷ್ಯರಿಗೆ ನಿರೋಧಕ ಶಕ್ತಿ ಇರುವುದಿಲ್ಲ. ಒಬ್ಬರಿಂದ ಒಬ್ಬರಿಗೆ ಹರಡುತ್ತಲೇ ಹೋಗುತ್ತಿರುವುದು ಕಣ್ಣೆದುರಿಗೇ ಇದೆ. ಇದಕ್ಕೆ ನಿಸರ್ಗವನ್ನು ದೂಷಿಸಿದರೆ ಫಲವೇನು? ಹೀಗಿದ್ದರೆ ಹೇಗೆ ಎಂದು ಸಾವಿರ ಪ್ರಶ್ನೆಗಳನ್ನು ಕೇಳಬಹುದು. ವುಹಾಂಗ್‌ನಲ್ಲಿ ಒಡನೆಯೇ ಇದು ಮನುಷ್ಯರಿಗೆ ಹರಡದಂತೆ ತಡೆದಿದ್ದರೆ? ಅಂತರರಾಷ್ಟ್ರೀಯ ವಿಮಾನಗಳ ಹಾರಾಟವನ್ನು ತುರ್ತಾಗಿ ಚೀನಾ ನಿಲ್ಲಿಸಿದ್ದರೆ?

ಈಗ ಇದು ಪ್ರಶ್ನಿಸುವ ಸಮಯವಲ್ಲ, ತಂತ್ರಜ್ಞಾನವಷ್ಟೇ ಅಲ್ಲ, ಈಗ ಕಾಯಿದೆಗಳೂ ಜಾಗತೀಕರಣಕ್ಕೆ ಒಗ್ಗಿರುವ ಸಮಯ. ಬಹುಶಃ ಇದನ್ನೇ 'ನಮ್ಮ ಪಾಪದ ಕೊಡ ತುಂಬಿದೆ' ಎಂದೋ, 'ಮಾಡಿದ್ದುಣ್ಣೊ ಮಹಾರಾಯ' ಎಂದೋ ಜನಸಾಮಾನ್ಯರು ಈ ಗಳಿಗೆಯಲ್ಲಿ ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಿರುವುದು.

ಕೊರೊನಾ ಲಾಕ್‌ಡೌನ್ ಕಾರಣದಿಂದಾಗಿ 'ಭೂಮಿ ಈಗ ಸ್ವಲ್ಪ ಉಸಿರಾಡುತ್ತಿದೆ' ಎನ್ನುವ ಮಾತನ್ನು ಮತ್ತೆ ನೆನಪಿಸಿಕೊಳ್ಳೋಣ. ಭೂಮಿ ತನ್ನ ಉಸಿರಾಟದ ಸಹಜಗತಿಯನ್ನು ತನ್ನಷ್ಟಕ್ಕೆ ಸರಿಪಡಿಸಿಕೊಳ್ಳಬಲ್ಲದು ಎನ್ನುವುದಕ್ಕೆ ಪ್ರಸಕ್ತ ಸಂದರ್ಭ ಒಂದು ಉದಾಹರಣೆಯಷ್ಟೇ. ಆದರೆ, ನಾವು ನಮ್ಮ ಉಸಿರಾಟಕ್ಕೆ ಭೂಮಿಯನ್ನೇ ನೆಚ್ಚಿದ್ದೇವೆ. ಮತ್ತೆ ಭೂಮಿಯ ಕೊರಳು ಹಿಂಡಿದರೆ, ಆಗ ಭೂಮಿ ತಿರುಗಿಬಿದ್ದರೆ, ನಮ್ಮ ಉಸಿರು ನಿಲ್ಲಲೂಬಹುದು.

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in